

# ನೆಲ ಕುಸಿಯೆ ಪದವಿಲ್ಲ...

ಟರ್ಕಿ ಮತ್ತು ಸಿರಿಯಾಗಳಲ್ಲಿ ಸಂಭವಿಸಿರುವ ಭೂಕಂಪ ಇತ್ತೀಚಿನ ವರ್ಷಗಳಲ್ಲಿ ಜಗತ್ತು ಕಂಡ ಬಹುದೊಡ್ಡ ಪ್ರಾಕೃತಿಕ ದುರಂತ. ಇಂಥ ವಿಕೋಪಗಳು ಸಂಭವಿಸಿದಾಗ, ಪ್ರಕೃತಿಯ ಕುರಿತ ನಮ್ಮ ಸಂವೇದನಾಕೋಶಗಳು ಜಾಗೃತಗೊಳ್ಳಬೇಕು. ಪ್ರಕೃತಿಯನ್ನು ಅರಿತುಕೊಳ್ಳಲು ಅಗತ್ಯವಾದ ಕುತೂಹಲ ಹಾಗೂ ವಿನಯ ನಮ್ಮೊಳಗೆ ಜಾಗೃತಗೊಳ್ಳಬೇಕು. ಪ್ರಕೃತಿಯ ಅನಂತ ಶಕ್ತಿಯ ಎದುರು ಮನುಷ್ಯ ಆಟಿಕೆ ಮಾತ್ರ ಎನ್ನುವ ಅರಿವು ಎಲ್ಲರದಾಗಬೇಕು. ಪ್ರಸಕ್ತ ದುರಂತ, ಭೂಮಿಯ ಸಂರಚನೆಯನ್ನು ಅರಿಯಲು ಹಾಗೂ ವಿಜ್ಞಾನವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ನಮ್ಮನ್ನು ಪ್ರೇರೇಪಿಸಬೇಕು.

■ ಗುರುರಾಜ್ ಎಸ್. ದಾವಣಗೆರೆ